## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 444/2021

ಚಾಸಾಃ( 01 ) ಪ್ರಾಸಾ ( 01 )

ದಿನಾಂಕಃ 17-11-2025 ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಲಕ್ಷ್ಮಪ್ಪ |
| ತಂದೆ ಹೆಸರು | ಭೀಮಪ್ಪ ದಾಸರ |
| ವಯಸ್ಸು | 76 ವರ್ಷ, |
| ಉದ್ಯೋಗ | ನಿವೃತ್ತ ಶಿಕ್ಷಕ |
| ವಾಸಸ್ಥಳ | ನೀರಲಗಿ |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

ನನ್ನ ಶಿಕ್ಷಣ ವೃತ್ತಿಯಿಂದ ನಿವೃತ್ತಿ ಹೊಂದಿದ ನಂತರ ನಾನು ನನ್ನ ಇಬ್ಬರ ಗಂಡು ಮಕ್ಕಳುಗಾದ ರಾಜೇಶ ಮತ್ತು ಪ್ರಹ್ಲಾದ್ ರವರ ಬಳಿ ಸ್ವಲ್ಪ ಸ್ವಲ್ಪ ದಿನಗಳ ಮಟ್ಟಿಗೆ ವಾಸಿಸುತ್ತಿದ್ದೇನು. ರಾಜೇಶು ಕಾರವಾರದಲ್ಲಿ, ಪ್ರಹ್ಲಾದ್ ಶಿವಮೊಗ್ಗದಲ್ಲಿ ವಾಸ ಇರುತ್ತಾರೆ. ದಿಃ 22-12-2020 ರಂದು ನಾನು ನಮ್ಮ ಗ್ರಾಮಕ್ಕೆ ಹೋಗಿ ಮತ ಚಲಾಯಿಸಿ, ದ್ವಿಚಕ್ರವಾಹನದಲ್ಲಿ ಚಸಾ 4 ರವರ ಕರೆದುಕೊಂಡು ನಮ್ಮ ಜಮೀನು ಸರ್ವೇ ನಂ. 105/110 ನ್ನು ನೋಡಿಕೊಂಡು ಬರಲು ಮದ್ಯಾಹ್ನ ಹೋಗಿದ್ದಾಗ ಅಲ್ಲಿ 1 ನೇ ಆರೋಪಿ ಇದ್ದು, ನೀನು ಇಲ್ಲಿಗೆ ಏಕೆ ಬಂದಿರುವೇ ಇದು ನಮ್ಮ ಜಮೀನು ಇದೆ ಎಂದು ನನಗೆ ಸೂಳೆ ಮಗ ಎಂದು ಅವಾಚ್ಯವಾಗಿ ಬೈದು, 1 ನೇ ಆರೋಪಿ ತನ್ನ ಸಹೋದರ 2 ನೇ ಆರೋಪಿಗೆ ದೂರವಾಣಿ ಕರೆ ಮಾಡಿದ್ದು ಅಗ 2 ನೆ ಆರೋಪಿ 3 ನೇ ಆರೋಪಿಯನ್ನು ಅಲ್ಲಿಗೆ ಕರೆದುಕೊಂಡು ಬಂದು ನನಗೆ ಹೊಡೆ ಬಡಿ ಮಾಡಿದ್ದು, ನಂತರ ಪ್ರಶಾಂತನಿಗೆ ದೂರವಾಣಿ ಕರೆ ಮಾಡಿದ್ದು ಅವನುಸಹ ಫೋನ್ ನನ್ನ ಕೈಗೆ ಕೊಟ್ಟಾಗ ಅಲ್ಲಿಗೆ ಏಕೆ ಬಂದಿದ್ದಿಯಾ ಮುದಿಯ ಎಂದು ಅವಾಚ್ಯ ವಾಗಿ ಬೈದು, 1 ರಿಂದ 3 ನೇ ಆರೋಪಿ ನನಗೆ ಜೀವ ಸಹಿತ ಬಿಡುವುದಿಲ್ಲಎಂದು ಜೀವ ಬೇದರಿಕೆ ಹಾಕಿದ್ದು, ನಂತರ ಪ್ರಶಾಂತ ಎಂಬ ವ್ಯಕ್ತಿಯು ಈತನು 1 ರಿಂದ 3 ನೇ ಆರೋಪಿತರಿಗೆ ಜೀವ ಸಹಿತ ಬಿಡಬೇಡಿ ಎಂದು ಪ್ರಚೋದನೆ ಮಾಡಿದ್ದು ಇರುತ್ತದೆ. ನಂತರ 1 ರಿಂದ 3 ನೇ ಆರೋಪಿತರು ನನ್ನ ಬಲಗಾಲಿಗೆ ಹಾಗೂ ಮೈಗೆ ಹೊಡೆ ಬಡೆ ಮಾಡಿದ್ದು, ನಂತರ ನನ್ನ ಕಿರುಬೆರಳನ್ನು ಸಹ ಮುರಿದಿರುತ್ತಾರೆ. ಚಸಾ 4 ರವರು 108 ರ ವಾಹನಕ್ಕೆ ಕರೆ ಮಾಡಿ ನನನ್ನು ಆಸ್ಪತ್ರೆಗೆ ದಾಖಲಿಸಿರುತ್ತಾರೆ. ದಿಃ 24-12-2020 ರಂದು ಜಿಲ್ಲಾ ಆಸ್ಪತ್ರೆಗೆ ಬಂದು ನನ್ನ ದೂರನ್ನು ಪಡೆದಿರುತ್ತಾರೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದುಅದನ್ನು ನಿಪಿ 1 ಎಂದು, ಸಾಕ್ಷಿಯ ಹೇಳಿಕೆಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ**

ಕೋರಿಕೆಯ ಮೇರೆಗೆ ಮುಂದೂಡಲಾಗಿದೆ.

ಮರು ವಿಚಾರಣೆ ಇಲ್ಲ.
(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

ಹೆ. ಜೆ ಎಂ ಎಫ್ ಸಿ ಕೊಪ್ಪಳ.